**O.S.No. 49/2021**
**PW2**

ದಿನಾಂಕ 16.12.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ವಿಚಾರಣೆಃ ಪ್ರತಿವಾದಿ ಪರ ಶ್ರೀ.ಎಂ ಕೆ ಎನ್. ವಕೀಲರಿಂದಃ</u>

ವಾದಿ ನನ್ನ ಅಕ್ಕನ ಮಗ. ವಾದಿ ಬೆಂಗಳೂರಿನಲ್ಲಿ ವಾಸ ಇದ್ದಾರೆ. ವಾದಿಯ ಜಮೀನಿನ ಉಸ್ತುವಾರಿಯನ್ನು ನಾನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿ. ವಾದಿ ಏನು ವ್ಯವಹಾರ ಮಾಡುತ್ತಾರೆ ಎಂದರೆ ಸಾಕ್ಷಿ ಹೋಟೆಲ್ ಮತ್ತು ವ್ಯವಸಾಯವನ್ನು ಮಾಡುತ್ತಾರೆ ಎಂದು ಹೇಳುತ್ತಾರೆ.

2. ವಾದಿ ಮತ್ತು 1ನೇ ಪ್ರತಿವಾದಿಗೆ ಏನು ಸಂಬಂಧ ಎಂದರೇ ಸಾಕ್ಷಿ ವಾದಿಯ ಚಿಕ್ಕಪ್ಪನ ಮಗಳನ್ನು 1ನೇ ಪ್ರತಿವಾದಿಗೆ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ವಾದಿಯ ಸಂಬಂಧಿಗಳಿಗೆ ಹಣದ ಸಹಾಯ ಬೇಕು ಎಂದರೆ ಮಾಡುತ್ತಿದ್ದರು ಎಂದರೇ ಹೌದು. 1ನೇ ಪ್ರತಿವಾದಿಯು ಸಹ ವಾದಿಯಿಂದ ಹಣಕಾಸು ಸಹಾಯವನ್ನು ಪಡೆದುಕೊಂಡಿದ್ದರು ಎಂದರೆ ಇಲ್ಲ. ಸಾಲದ ಹಣವನ್ನು ತಿರುವಳಿ ಮಾಡಲು 1ನೇ ಪ್ರತಿವಾದಿ ಕೋಡಿಪುರ ಗ್ರಾಮದ ಸರ್ವೆ ನಂ 10/4 ರಲ್ಲಿ 21 ಗುಂಟೆ ಜಮೀನಿನನ್ನು ವಾದಿ ಗೆ ಮಾರಾಟ ಮಾಡಿದರೇ ಎಂದರೇ ಅದರ ಬಗ್ಗೆ ನನಗೆ ಗೊತ್ತಿಲ್ಲ. ಆ 21 ಗುಂಟೆ ಜಮೀನಿಗೆ ನೀವು ಸಹ ಸಾಕ್ಷಿ ಹಾಕಿದ್ದೀರಿ ಎಂದರೆ ಹೌದು. ಈ ವ್ಯವಹಾರವನ್ನು ಹೊರತು ಪಡಿಸಿ ವಾದಿ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ವ್ಯವಹಾರ ಇಲ್ಲ ಎಂದರೆ ಹೌದು. 21 ಗುಂಟೆ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಹೊರತು ಪಡಿಸಿ ಬೇರೇ ಯಾವುದಾರರು ವ್ಯವಹಾರಕ್ಕೆ ಕರೆಸಿದ್ದಾರ ಎಂದರೆ ಸಾಕ್ಷಿ ಇನ್ನೊಂದು ಜಮೀನನ್ನು ಖರೀದಿ ಮಾಡಿದ್ದಾರೆ ಅದಕ್ಕೆ ಕರೆಸಿದ್ದರು ಎಂದು ಹೇಳುತ್ತಾರೆ. ಆ ಖರೀದಿ ವ್ಯವಹಾರ ಮುಗಿದಿದೆಯ ಎಂದರೆ ಇಲ್ಲ. 1.19 ಎಕರೆಗೆ ಸಂಬಂಧಪಟ್ಟಂತೆ ಯಾವಾಗ ಮಾತು ಕತೆ ಆಗಿದೇ ಎಂದರೆ ಸಾಕ್ಷಿ 2021 ರಲ್ಲಿ ಆಗಿರುತ್ತದೆ ಎಂದು ಹೇಳುತ್ತಾರೆ. 21 ಗುಂಟೆ ಮಾರಾಟ ಮಾಡಿದ ಸ್ವತ್ತಿನ ಅಳತೆ ವಿಸ್ತೀರ್ಣ ದಲ್ಲಿ ವ್ಯತ್ಯಾಸ ಇತ್ತು ಎಂದರೇ ನನಗೆ ಗೊತ್ತಿಲ್ಲ. ಸರ್ವೇ ನಂ 10/4 ಅಳತೆ ಪೂರ್ಣ ಆಗಿದೆಯ ಎಂದರೇ ಇಲ್ಲ. 10/4 ರ ಅಳತೆ ಸರಿದೋಗಿಸುವವರೆಗೆ ಭದ್ರತೆಗಾಗಿ ನಿಪಿ-1 ನ್ನು ಬರೆದುಕೊಟ್ಟಿದ್ದಾರೆ ಎಂದರೇ ನನಗೆ ಗೊತ್ತಿಲ್ಲ. ಸರ್ವೇ 10/4 ಕ್ರಯ ಆದ ಕಾಲಕ್ಕೆ ಯಾವುದೇ ಹಣ ಸಂದಾಯ ಆಗಿಲ್ಲ ಎಂದರೇ ನನಗೆ ಗೊತ್ತಿಲ್ಲ.15/2 ಆಗುವ ಸಂದರ್ಭದಲ್ಲಿ ಹಣ ಸಂದಾಯ ಆಗಿಲ್ಲ ಎಂದರೆ ಸಾಕ್ಷಿ 4 ಲಕ್ಷ ಕೊಟ್ಟು ಕರಾರು ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಕರಾರು ಉಪನೊಂದಾಣಿಕಾರಿಗಳ ಕಚೇರಿಯಲ್ಲಿ ಆಗಿರುತ್ತದೆ. ಅದನ್ನು ಯಾರು ತಯಾರು ಮಾಡಿದ್ದರು ಎಂದರೇ ಸಾಕ್ಷಿ ದಸ್ತಾವೇಜು ಬರಹಗಾರರದ ಶ್ರೀನಿವಾಸ್ ಎಂದು ಹೇಳುತ್ತಾರೆ. ಅದರ ಒಕ್ಕಾಣೆಗಳನ್ನು ಯಾರು ಹೇಳಿ ಬರೆಸಿದ್ದಾರೆ ಎಂದರೆ ಸಾಕ್ಷಿ ಇಬ್ಬರು ಪಕ್ಷಗಾರರು ಸೇರಿ ಬರೆಸಿರುತ್ತಾರೆ ಎಂದು ಹೇಳುತ್ತಾರೆ.

OS 49/2021
PW-2

3. ಕೋಡಿಪುರ ಸರ್ವೆ ನಂಬರ್ ನಲ್ಲಿ ಗುಂಟೆಗೆ ಒಂದುವರೆ ಇಂದ ಎರಡು ಲಕ್ಷ ಇದೆ ಎಂದರೇ ನನಗೆ ಗೊತ್ತಿಲ್ಲ. 1.19 ಎಕರೆ ಅಂದಾಜು 1 ಕೋಟಿ ಗೂ ಹೆಚ್ಚು ಬೆಲೆ ಬಾಳುವ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯ ನಡುವೆ ದಾವಾ ಸ್ವತ್ತಿಗೆ ಯಾವಾಗ ಮಾತುಕತೆ ಆಗಿದೆ ಎಂದರೇ ದಿನಾಂಕ ಗೊತ್ತಿಲ್ಲ. ಆದೆರ 15 ದಿನದ ನಂತರ ದಿನಾಂಕ 28.03.2018 ರಂದು ಕರಾರರು ಆಗಿದೆ ಎಂದು ಹೇಳುತ್ತಾರೆ. ಕರಾರು ಮಾತುಕತೆ ಆಗುವಾಗ ಹಣದ ವ್ಯವಹಾರ ಆಗಿದೆ ಎಂದರೇ ಸಾಕ್ಷಿ 4 ಲಕ್ಷವನ್ನು ಕೊಟ್ಟು 8 ತಿಂಗಳ ಅವಧಿಗೆ ಕರಾರು ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಆ ದಿನ ಮಾತುಕತೆಯಲ್ಲಿ ಭಾಗಿಯಾಗಿದ್ದೆ ಹಾಗೂ 10 ಲಕ್ಷ 32 ಸಾವಿರದ 500 ರೂಗಳಿಗೆ ಮಾತುಕತೆಯಲ್ಲಿ ಭಾಗಿಯಾಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. 21 ಗುಂಟೆಗೆ ಸಂಬಂಧ ಪಟ್ಟ ಕ್ರಯ ಪತ್ರ ಹಾಗೂ 21 ಗುಂಟೆಗೆ ಸಂಬಂದಪಟ್ಟಂತೆ ಈ ಮೊದಲನೆ ನೀಡಿದ ಹಣಕ್ಕೆ ಸಂಬಂದಪಟ್ಟಂತೆ ನಿಪಿ-1 ಒಂದೇ ದಿನ ಒಂದೇ ಸಮಯದಲ್ಲಿ ನೋಂದಾಣಿ ಆಗಿದೆ ಎಂದರೇ ಸಾಕ್ಷಿ 21 ಗುಂಟೆಗೆ ಸಂಬಂದಪಟ್ಟಂತೆ ಅದೇ ದಿನ ನೋಂದಾಣಿ ಆಗಿದೆ ಅದು ಬೇರೆ ಮತ್ತು ಇದುವೇ ಬೇರೆ ಎಂದು ಹೇಳುತ್ತಾರೆ.ನಾನು ವಾದಿಯ ಸಹೋದರ ಮಾವ ಆಗಿದ್ದು ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ಯಾವುದೇ ಮಾತು ಕತೆ ಆಗಿಲ್ಲದೆ ಇದ್ದರು ಹಾಗೂ ಯಾವುದೇ ಹಣ ಸಂದಾಯ ಆಗದೆ ಇದ್ದರು ವಾದಿಗೆ ಸಹಾಯ ಮಾಡಲು ಕಾರರು ಮಾಡುವ ದಿನ ನಾನು ಇದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲದೆ ಉಪನೋಂದಾಣಿಕಾರಿಯವರ ಕಚೇರಿಯಲ್ಲಿ 4 ಲಕ್ಷ ಹಣ ಮುಂಗಾಡವಾಗಿ ಪಡೆದು 8 ತಿಂಗಳ ಅವಧಿ ಒಳಗೆ ಕ್ರಯ ಪತ್ರವನ್ನು ಬರೆದುಕೊಡುತ್ತೇವೆ ಎಂದು ಒಪ್ಪಿ ಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ಸೇರಿದ ಬೆಲೆ ಬಾಳುವ ಆಸ್ತಿಯನ್ನು ಕಬಳಿಸಲು ಹುನ್ನಾರ ಮಾಡಿದ್ದು ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸುಳ್ಳು ಎಂದರೇ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ

ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

**(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು**)**

**(**ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.**)**